POLLUTION OF TUNGABHADRA RIVER WATER

838. Sri D. NARAYANA DAS (Harapanahalli).—

Will the Minister for Industries be pleased to state :—

(*a*) whether it has come to notice of the Government that many people and the cattle of Tadaki, Nandyal, Yetlahalli villages situated on the banks of Tungabhadra river died due to drinking of water which was polluted by the release of effluent by Harihar Polyfibre Factory ;

(*b*) whether the Government would take some steps to supply drinking water in these villages at least now ?

Sri S. M. KRISHNA (Minister for Industries).—

(*a*) No.

(*b*) The company itself has taken necessary steps for supply of drinking water.

ಶ್ರೀ ಡಿ. ನಾರಾಯಣ ದಾಸ್.—ಕಂಪೆನಿಯವರು ಕುಡಿಯುವ ನೀರನ್ನೊದಗಿಸಲು ಯಾವ ಹಳ್ಳಿಗಳ ಬಗ್ಗೆ ಕ್ರಮ ಕೈಗೊಂಡಿದ್ದಾರೆ ?

† ಶ್ರೀ ಎಸ್. ಎಂ. ಕೃಷ್ಣ.—ಆ ತಪಶೀಲಲ್ಲಿ, ಸುಮಾರು ಐದಾರು ಹಳ್ಳಿಗಳಿಗೆ ಬೋರ್ ವೆಲ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆಮಾಡಿದ್ದಾರೆ. ಇನ್ನೂ ಕೆಲವು ಹಳ್ಳಿಗಳಿಗೆ ವ್ಯವಸ್ಥೆ ಮಾಡಬೇಕೆಂಬ ಉದ್ದೇಶವಿದೆ. ಆದರೆ ಆ ಹಳ್ಳಿಗಳಲ್ಲಿರುವವರು ಸಹಕರಿಸದಿರುವುದರಿಂದ ಬೋರ್ ವೆಲ್ ಕೆಲಸ ನಿಧಾನವಾಗಿದೆ.

ಶ್ರೀ ಡಿ. ನಾರಾಯಣ ದಾಸ್.—ಈ ಹಳ್ಳಿಗಳಲ್ಲಿ ಬೋರ್‌ವೆಲ್ ಮಾಡಿಲ್ಲ. ಮಂತ್ರಿಗಳು ಹೇಳಿರುವುದು ಸತ್ಯಕ್ಕೆ ದೂರವಾದುದು. ಅದಲ್ಲದೆ ಬೋರ್‌ವೆಲ್ ಮಂಜೂರು ಮಾಡಿದ್ದರೂ ಮೆಷೀನ್ ಇಲ್ಲದೆ ಕೆಲಸ ನಿಂತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಈ ಪ್ರಶ್ನೆಗೆ ಆಗಾಗ್ಯೆ ಉತ್ತರ ಕೊಡಲಾಗಿದೆ ಹಿಂದೆ ಪ್ರಶ್ನೆ ಮಾಡಿದಾಗ ನಾಲ್ಕು ಮಂತ್ರಿಗಳು ಮಧ್ಯೆ ಪ್ರವೇಶಿಸಿ ಉತ್ತರ ಕೊಟ್ಟಿದ್ದಾರೆ. ತೊಂದರೆಯಿದೆ ಎಂಬುದರಲ್ಲಿ ಯಾವ ವಿಧವಾದ ಅನುಮಾನವೂ ಇಲ್ಲ. ಈ ತೊಂದರೆಯನ್ನು ಹೇಗೆ ನಿವಾರಣೆ ಮಾಡ ಬೇಕು ಎಂದು ಸೂಚಿಸಲು ಸರಕಾರ ಒಂದು ಸಮಿತಿ ಮಾಡಿದೆ, ಪೊಲ್ಯೂಷನ್ ವಿಚಾರದಲ್ಲಿ ಅವರು ವರದಿ ಮಾಡುವರು. ಮಾನ್ಯ ಸದಸ್ಯರು ಕುಂದು ಕೊರತೆ ನಿವೇದನೆ ಮಾಡಿದ್ದಾರೆ. ಬಾವಿ ತೆಗೆಸಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಸಮಾಧಾನ ಒದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—(ಅ) ಪ್ರಶ್ನೆಗೆ ಇಲ್ಲವೆಂದು ಉತ್ತರ ಕೊಡಲಾಗಿದೆ. ಅದರ ಅರ್ಥ ಜನ ಮತ್ತು ಜಾನುವಾರು ಸತ್ತಿಲ್ಲ ಎಂದು ಭಾವಿಸಬೇಕೇ ಅಥವ ತುಂಗಭದ್ರ ನೀರು ಕಲುಷಿತ ವಾಗಿಲ್ಲ ಎಂದು ಭಾವಿಸಬೇಕೇ ?

Sri M. S. KRISHNA.—Government is aware that this pollution has caused considerable problems for both the people as well as the cattle. We concede that point. It is only on the basis of that major premise that we are proceeding further. So, my Hon'ble friend need not have any apprehension about Government's anxiety in this matter. We are also equally agitated. We certainly will see what best we can do to help the people to solve this problem.

ಶ್ರೀಮತಿ ನಾಗಮ್ಮ ಸಿ: ಕೇಶವಮೂರ್ತಿ.—ಈಗ ಇದರಿಂದ ಏರ್ ಪೊಲ್ಯೂಷನ್ ಬೇರೆ ಆಗುತ್ತಿದೆ, ಕೆಲವು ವರ್ಷಗಳಿಂದ ಇದಾಗುತ್ತಿದೆ. ದಾವಣಗೆರೆಯವರೆಗೂ ವಾಸನೆ ಬರುತ್ತಿದೆ, ರಾಣಿಬೆನ್ನೂರಿಗೂ ದುರ್ವಾಸನೆ ಬರುತ್ತಿದೆ. ಈ ಏರ್ ಪೊಲ್ಯೂಷನ್ ಬಗ್ಗೆ ಸರಕಾರ ಏನು ಮಾಡಬೇಕೆಂದಿದೆ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಹೇಳುವುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಕಂಪನಿಯವರೇ ಕುಡಿಯುವ ನೀರನ್ನು ಒದಗಿಸುವುದಕ್ಕೆ ಅವಶ್ಯಕವಾದ ಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ತಾವು ಹೇಳಿದ್ದೀರಿ, ತಡಕಿ, ನಂದ್ಯಾಲ, ಎಟ್ಟಹಳ್ಳಿ ಗ್ರಾಮದ ಜನ ಮತ್ತು ಜಾನುವಾರುಗಳು ಉತ್ತಮವಾದ ಯೋಗ್ಯವಾದ ನೀರನ್ನು ಉಪಯೋಗಿಸುತ್ತಿವೆ ಎಂದು ಸರ್ಕಾರಕ್ಕೆ ವರದಿ ಏನಾದರೂ ಬಂದಿದೆಯೆ ? ಇಲ್ಲದೆ ಹೋದರೆ ಸರ್ಕಾರದವರೇ ನೇರವಾಗಿ ಅಗತ್ಯವಾದ ರೀತಿಯಲ್ಲಿ ನೀರನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡುತ್ತೀರಾ ?

(ಉತ್ತರ ಇಲ್ಲ)

ಶ್ರೀ ಕೆ. ಎಫ್. ಪಾಟೀಲ್.—ಪೂರ್ವದಿಂದ ಪಶ್ಚಿಮಕ್ಕೆ 12 ಮೈಲುಗಳವರೆಗೂ ಹೆಚ್ಚಾಗಿ ದುರ್ವಾಸನೆ ಇದ್ದರೆ ಅಲ್ಲಿ ಜನ ಹೇಗೆ ಇರಬೇಕು ? ಇದನ್ನು ಪದೇ ಪದೇ ಹೇಳಿದರೂ ಸಹ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಇದರಿಂದ ಕುಡಿಯುವ ನೀರಿಗೆ ತೊಂದರೆ, ದನಕರುಗಳಿಗೆ ತೊಂದರೆ, ಇರಿಗೇಷನ್‌ಗೆ ತೊಂದರೆ ಎಂದು ಹೇಳಿದರೂ ಕೂಡ ಇದರ ಬಗ್ಗೆ ಸರ್ಕಾರದವರು ಗಮನ ಕೊಡುವುದಿಲ್ಲ. ಅಲ್ಲಿಯ ಜನ ಏನು ಪಾಪ ಮಾಡಿದ್ದಾರೆ ? ಅಲ್ಲಿಯ ಜನ ನಿಜವಾಗಿಯೂ ಶಪಿಸುತ್ತಿದ್ದಾರೆ. ಆದ್ದರಿಂದ ಮಂತ್ರಿಗಳು ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿ ಒಬ್ಬರು ಈ ವಿಷಯದಲ್ಲಿ ಎಕ್ಸ್‌ಪರ್ಟ್ ಇದ್ದಾರೆ. ಅವರನ್ನು ಕೇಂದ್ರ ಸರ್ಕಾರದವರು ಆಗಿಂದಾಗ್ಗೆ ಈ ಏರ್ ಪಲ್ಯೂಷನ್ ಬಗ್ಗೆ ಕನ್‌ಸಲ್ಟ್ ಮಾಡುತ್ತಿರುತ್ತಾರೆ. ಮಾನ್ಯ ಕೆ. ಎಫ್. ಪಾಟೀಲರೂ ವ್ಯಕ್ತಪಡಿಸಿದ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅವರನ್ನು, ನಾನು ಮುಂದಿನ ತಿಂಗಳ ಮೊದಲನೆಯ ವಾರದಲ್ಲಿ ಕರೆದುಕೊಂಡು ರಾಣಿಬೆನ್ನೂರು, ಹರಿಹರ, ಮುಂತಾದ ಪ್ರದೇಶಗಳಲ್ಲಿ ಸಂಚಾರ ಮಾಡಿ ಇದರ ತೀವ್ರತೆಯನ್ನು ಕಡಿಮೆ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ಮಾನ್ಯ ಜಯಪ್ರಕಾಶನಾರಾಯಣ್ ಅವರು ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಹೇಳಿದರು, ಈಗಾಗಲೇ, ಅಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಪಂಪುಸೆಟ್ಟುಗಳು ಸಿಕ್ಕಿದೆ ತೊಂದರೆಯಾಗಿದೆ ಎನ್ನುವ ವರ್ತಮಾನ ಇದೆ. ಇದನ್ನೂ ಕೂಡ ಪರಿಶೀಲನೆ ಮಾಡಿ ಎರ್ಲಾ ಹಳ್ಳಿಗಳಿಗೂ ಕಂಪನಿಯವರೇ ನೀರನ್ನು ಒದಗಿಸಿಕೊಡತಕ್ಕ ಕರ್ತವ್ಯವಾದ ಆದೇಶವನ್ನು ಕೊಟ್ಟು, ಅವರು ಅದನ್ನು ಪರಿಶೀಲನೆ ಮಾಡುವಂತೆ ಮಾಡುವ ಹೊಣೆಗಾರಿಕೆಯನ್ನೂ ನಾವು ವಹಿಸಿಕೊಳ್ಳುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ.—ಈ ಕಾರ್ಖಾನೆಯವರು ಉಪಯೋಗಿಸಿದ ಕೊಳಚೆ ನೀರನ್ನು ನದಿಗೆ ಬಿಡುವುದರಿಂದ ಈ ತೊಂದರೆಯಾಗಿದೆ, ಈ ನೀರನ್ನು ಬೇರೆ ಕಡೆಗೆ ತಿರುಗಿಸಿ ಬಿಟ್ಟರೆ ಒಳ್ಳೆಯದಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.—ಇದು ಒಂದು ನಲಹೆ ಸರ್ಕಾರದ ಮುಂದೆ ಇದೆ. ಅಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಜಮೀನು ಇದೆ, ಎಫ್ಲ್ಯುಯಂಟ್ ರಿಲೀಸ್ ಆದದ್ದು ಎಲ್ಲವನ್ನು ಕೂಡ ಫಾರೆಸ್ಟ್ ಪ್ರದೇಶಗಳಿಗೆ ಸಾಗಿಸಿಕೊಂಡು ಹೋಗಬೇಕು ಎಂದು ಒಂದು ಯೋಚನೆ ಸರ್ಕಾರದ ಮುಂದೆ ಇದೆ. ಕಳೆದ ಸಾರಿ ಲೋಕೋಪಯೋಗಿ ಸಚಿವರು ಹೇಳಿದ ಹಾಗೆ ಈ ಯೋಚನೆಯನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುತ್ತಾರೆ.

ಶ್ರೀ ಡಿ. ನಾರಾಯಣ ದಾಸ್.—ಹರಿಹರದ ಪಾಲಫೈಬರ್ ಸ್ಯೋಕ್ ಹರಪನಹಳ್ಳಿ, ಹರಿಹರ, ದಾವಣಗೆರೆ, ರಾಣಿಬೆನ್ನೂರು ಹೀಗೆ 10-15 ಮೈಲಿಯವರೆಗೆ ಹೋಗುವುದರಿಂದ ಇದು ಆರೋಗ್ಯದೃಷ್ಟಿಯಿಂದ ಬಹಳ ಕೆಟ್ಟದ್ದಾಗಿದೆ. ಪಾಲಫೈಬರ್ ಕಾರ್ಖಾನೆ ಒಡತಕ್ಕ ಸ್ಯೋಕ್ ಪೈಪ್ 300 ಅಡಿ ಎತ್ತರದಲ್ಲಿರಬೇಕು ಎಂದು ಇದೆ. ಆದರೆ ಇದು ಬರೀ 80 ಅಡಿ ಮಾತ್ರ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಅದು ನನ್ನ ಗಮನಕ್ಕೆ ಬಂದಿಲ್ಲ, ಇದು ವಿಚಾರಣೆಗೆ ಯೋಗ್ಯ ವಾಗಿರಿತಕ್ಕ ಮಾತು.

ಅಧ್ಯಕ್ಷರು.—ಶ್ರೀ ಸಿ. ವಿ. ಪೆಂಕಟರಾಯಪ್ಪನವರ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳಲಾಗುವುದು.

ENCROACHMENT OF GOVERNMENT LANDS BY KERALITES IN BORDER TALUKS.

912. Sri K. SUBRAMANYA GOWDA (Belthangadi).—

Will the Chief Minister be pleased to state :—

(*a*) the extent of Government lands encroached upon by the Keralites in the Border Taluks of Belthangadi, Sullia and Puttur, South Kanara District ;

(*b*) of them the number of cases in which land was encroached upon—

(i) since one to two years ago—

(ii) since two to five years ago—

(iii) since five to ten years ago—

(iv) since more than ten years ago ;

(*c*) the total extent of area in each taluk involved in such encroachment ;

(*d*) the steps the Government have taken to set right the same ?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*) 1,741-71 acres.

(*b*) (i) 65
(ii) 93
(iv) 149
(iv) 278.

(*c*) Belthangadi .. 113–00
Sullia .. 28–45
Puttur .. 1,600–26.

(*d*) Action is being taken to regularise or to evict as per the Mysore Land Revenue (Regularisation of Unauthorised Occupation of Lands) Rules, 1970.